"ಹಾಗಾದರೆ ನೀನೇ ಮಗೂನ ಕರೆಕೊಂಡು ಬಾ. ಶಿಂಜುಕುನಲ್ಲಿರೋ ಹಿಲ್ಟನ್ ಇದು. ರೂಮ್ ನಂಬರ್ 597."

"ನಾನು ಈಗಲೇ ಹೊರಟೆ."

ಇನ್ನೂ ತಮ್ಮ ದರ್ಪ ತೋರಿಸುವ ಸ್ಥಿತಿಯಲ್ಲಿಯೇ ಇದ್ದರು ರಾಗಿಣಿ. ತಮಗೆ ಬಂದಿದ್ದ ಇ – ಮೇಲ್ ಎಲ್ಲವನ್ನೂ ನೋಡಿದ್ದಾಯಿತು. ಗಂಡನಿಗೆ, ಮಗಳಿಗೆ ತಲಪಿದ ಸಮಾಚಾರ ತಿಳಿಸಿದ್ದಾಯಿತು. ಟೀವಿ ಹಾಕಿದರೆ ಏನೇನೋ ಚಾನೆಲ್ಲುಗಳು, ಒಂದೂ ಅರ್ಥವಾಗದು. ಐಪ್ಯಾಡಿನಲ್ಲಿದ್ದ ಹನುಮಾನ್ ಚಾಲೀಸ ಕೇಳುತ್ತಾ ಕುಳಿತರು. ಕೇವಲ ಅರ್ಧ ಗಂಟೆಯಲ್ಲಿಯೇ ರಿಸೆಪ್ಷನ್‌ನಿಂದ ಫೋನ್ – "ನಿಮ್ಮನ್ನು ಹುಡುಕಿಕೊಂಡು ಯಾರೋ ಬಂದಿದ್ದಾರೆ."

"ಕಳಿಸಿ" ಎಂದವರೇ ತಮ್ಮ ಮೊಮ್ಮಗನನ್ನು ನೋಡಲು ಸಿದ್ಧರಾದರು. ಅವನನ್ನು ನೋಡುವ ತವಕ ಒಳಗೆ ಕುದಿಯುತ್ತಿದ್ದರೂ ತಮ್ಮ ಐಸಿರಿಯ ದರ್ಪ ತೋರಿಸಿಕೊಳ್ಳುವ ಹಾಗಿಲ್ಲ. ಕನ್ನಡಿಯಲ್ಲಿ ಮುಖ ನೋಡಿಕೊಂಡು, ತಮ್ಮ ಡ್ರೆಸ್ ಸರಿಯಾಗಿದೆಯೇ ಎಂಬುದನ್ನು ಖಾತ್ರಿ ಪಡಿಸಿಕೊಂಡರು. ಯಾರಿಗೂ ಹೇಳದೆ ಜತೆಗೆ ಇದ್ದರೆ ಒಳ್ಳೆಯದು ಎಂದು ತಮ್ಮ ಮೊಮ್ಮಗನಿಗೆ ತಂದಿದ್ದ ಆಟದ ಸಾಮಾನುಗಳನ್ನು ನೋಡಿಕೊಂಡರು. ಆಗ ರೂಮಿನ ಬೆಲ್ ಆಯಿತು.

ಬಾಗಿಲನ್ನು ತೆರೆದಾಗ ರಿಂಕೊ ಮಗುವನ್ನು ತನ್ನ ಸೊಂಟಕ್ಕೆ ಕಟ್ಟಿದ್ದ ಚೀಲವೊದರಲ್ಲಿ ಇರಿಸಿಕೊಂಡು ನಿಂತಿದ್ದಳು. ಸೊಸೆ ಈಗ ಹುಡುಗಿಯಂತೆ ಕಾಣಲಿಲ್ಲ; ಬದಲಾಗಿ ಗೃಹಿಣಿಯಂತೆ ಕಂಡಳು. ರಿಂಕೊ ಅತ್ತೆಯನ್ನು ನೋಡಿ ಮುಗುಳ್ನಕ್ಕಳು; ರಾಗಿಣಿ ನಕ್ಕಂತೆ ನಟಿಸಿದರು. ರಿಂಕೊ ತನ್ನ ಶೂ ಕಳಚಿ ಒಳಗೆ ಬಂದಳು, ನಂತರ ಹಯೂಟೊನನ್ನು ಚೀಲದಿಂದ ಇಳಿಸಿದಳು. ಕೂಡಲೆ ಅವನು ಓಡಿ ಬಾಗಿಲ ಬಳಿಹೋಗಿ ತನ್ನ ಪುಟ್ಟ ಶೂಗಳನ್ನು ಬಿಟ್ಟುಬಂದು, ಸುತ್ತ ವೀಕ್ಷಿಸಿ ಏನೂ ಗೊತ್ತಾಗದವನಂತೆ ನಿಂತ. ರಿಂಕೊ ರಾಗಿಣಿಯತ್ತ ಕೈತೋರಿಸಿ 'ಒಬಾಸಾನ್(ಅಜ್ಜಿ)" ಎಂದಳು. ಹಯೂಟೊ ಅಜ್ಜಿಯತ್ತ ನೋಡಿ ದಿಗಿಲಾದವನಂತೆ ನಿಂತ. ರಾಗಿಣಿಗೆ ನೋಡಿ ಎಲ್ಲಿಲ್ಲದ ಆನಂದ. ಮೊಮ್ಮಗ ಮುದ್ದಾಗಿದ್ದಾನೆ, ತುಂಟ ಕಳೆ ಬೇರೆ! ಅವನತ್ತ ನೋಡಿ "ಹಯೂಟೊ" ಎಂದರು. ಅವನು ನಕ್ಕ. ಮುಂದಿರುವುದು ಮೊಮ್ಮಗ. ಅವನ ಮುಂದೆ ತಮ್ಮ ದರ್ಪ, ದೊಡ್ಡಸ್ತಿಕೆಗಳೇ? ತಮ್ಮ ಎಲ್ಲಾ ತೋರಿಕೆಯನ್ನು ಒಮ್ಮೆಗೇ ಬಿಸುಟು ರಾಗಿಣಿ ತಮ್ಮ ಎರಡೂ ಕೈಗಳನ್ನು ಚಾಚಿದರು. ಮೊಮ್ಮಗ "ಒಬಾಸಾನ್, ಒಬಾಸಾನ್" ಎನ್ನುತ್ತಾ ಅವರತ್ತ ಓಡಿಬಂದ. ಅವರು ಎತ್ತಿಕೊಂಡರೆ ಅವನಿಗೆ ಎಲ್ಲಿಲ್ಲದ ಆನಂದ. ಒಮ್ಮೆಗೇ ಅವರು ತೊಟ್ಟಿದ್ದ ಬಟ್ಟೆ, ಕೈಯಲ್ಲಿದ್ದ ಬಳೆ, ಕುತ್ತಿಗೆಯ ಸರ, ಕಿವಿಯ ವಾಲೆ, ಅವರ ಕೂದಲು ಎಲ್ಲವನ್ನು ಮುಟ್ಟಿ, ಪರಿಶೀಲಿಸಿ ನೋಡಿದ. ತಾಯಿಯಿಂದ ನಿರ್ದೇಶನ ಬಂದ ಕೂಡಲೇ ಅಜ್ಜಿಗೆ ಮುತ್ತಿಕ್ಕಿದ. ರಾಗಿಣಿ ಮೊಮ್ಮಗನಿಗೆ ಮುತ್ತಿನ ಮಳೆಗರೆದರು. ತಂದಿದ್ದ ಆಟದ ಸಾಮಾನುಗಳನ್ನು ಕೊಟ್ಟರು. ಅವನ್ನು ನೋಡಿ ಹಯೂಟೊ ಕುಣಿದಾಡಿದ.

ನಂತರ ಅಜ್ಜಿ ಸೋಫಾದ ಮೇಲೆ ಕುಳಿತರೆ ತಾನು ಹೋಗಿ ಅವರ ತೊಡೆಯ ಮೇಲೆ ಕುಳಿತ. ಹಾಗೇ ಮಲಗಿ ನಿದ್ದೆ ಹೋದ, ತಾಯಿ ನೋಡುತ್ತಾ ಕುಳಿತಳು. ಹಾಗೆಯೇ ತಮಗೂ ತೂಕಡಿಕೆ ಬಂದು ಕಣ್ಣು ಮುಚ್ಚಿದರು ರಾಗಿಣಿ. ಏನೋ ಮಂಪರು. ಅವರಿಗೆ ಸುನಿಲ್ ಇಪ್ಪತ್ತೈದು ವರ್ಷಗಳ ಹಿಂದೆ ಹೀಗೆ ತಮ್ಮ ತೊಡೆಯ ಮೇಲೆ ಮಲಗುತ್ತಿದ್ದುದರ ಜ್ಞಾಪಕ. ಈಗಲೂ ಅವನೇ ಮಲಗಿದ್ದಾನೆಯೋ ಎಂಬ ಭ್ರಮೆ. ಎಚ್ಚರಾದಾಗ ಧಾರಾಕಾರವಾಗಿ ಕಣ್ಣೀರು. "ನೋಡು ರಿಂಕೊ, ನನಗೆ ಸುನಿಲನದೇ ಜ್ಞಾಪಕ. ಅವನೂ ಹೀಗೆಯೇ ಮಲಗುತ್ತಿದ್ದ" ಎಂದರು.